MARCH 31, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಮನ್ ಕಿ ಬಾತ್; ಗದಗ ಜಿಲ್ಲೆಯ, ಕೆರೆಗಳ ಪುನಃಶ್ಚೇತನ ಕಾರ್ಯ ಶ್ಲಾಘಿಸಿದ, ಪ್ರಧಾನಮಂತ್ರಿ ನರೇಂದ್ರ ಮೋದಿ.**
- **‘ಆಪ್ತ ಗೆಳತಿ ನಿಮ್ಮ ಬಳಿಗೆ’; ವಿನೂತನ ಯೋಜನೆಗೆ, ಚಾಮರಾಜನಗರದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಿ.ಟಿ ಕವಿತಾ, ಚಾಲನೆ.**
- **ಚಿಕ್ಕಮಗಳೂರು ನಗರದ ತ್ಯಾಜ್ಯ, ಈಗ, ‘ಗಿರಿ ಹಸಿರು’ ಸಾವಯವ ಗೊಬ್ಬರ – ನಗರಸಭೆ ಅಧ್ಯಕ್ಷೆ, ಸುಜಾತಾ ಶಿವಕುಮಾರ.**
- **ಇಂದು, ಮುಸ್ಲಿಂ ಬಾಂಧವರಿಂದ, ಈದ್–ಉಲ್–ಫಿತರ್ ಆಚರಣೆ; ಗಣ್ಯರ ಶುಭಾಶಯ.**

<><><>

**ಈಗ ವಾರ್ತೆಗಳ ವಿವರ**

<><><>

**ದೇಶಾದ್ಯಂತ ‘ಜಲ್ ಸಂಚಯ್ ಜನ್ ಭಾಗಿದಾರಿ ಅಭಿಯಾನ್’ ಮೂಲಕ, ‘ಕ್ಯಾಚ್ ದ ರೇನ್’ ಆಂದೋಲನಕ್ಕೆ, ವ್ಯಾಪಕ ಜನ ಬೆಂಬಲ ವ್ಯಕ್ತವಾಗಿದೆ; ‘ಮನಸ್ಸಿದ್ದಲ್ಲಿ ಮಾರ್ಗ’ ಎಂಬಂತೆ, ಗದಗ್ ಜಿಲ್ಲೆಯ ಎರಡು ಹಳ್ಳಿಗಳ ಸಂಪೂರ್ಣ ಬತ್ತಿದ್ದ ಕೆರೆಗಳನ್ನು, ಸ್ವಯಂಸೇವಾ ಸಂಸ್ಥೆಗಳ ನೆರವಿನೊಂದಿಗೆ ಗ್ರಾಮಸ್ಥರೇ ಪುನರುಜ್ಜೀವಿತಗೊಳಿಸಿದ್ದು, ಮಾದರಿ ಕಾರ್ಯ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.**

**‘ಮನ್ ಕಿ ಬಾತ್’ನ 120ನೇ ಸಂಚಿಕೆಯಲ್ಲಿ ಅವರು, ದೇಶದ ಜನತೆಯನ್ನುದ್ದೇಶಿಸಿ, ಮಾತನಾಡಿದರು.**

<><><>

**ಮನ್ ಕಿ ಬಾತ್ /ಕ್ಯಾಚ್ ದ ರೇನ್/68 ಸೆಕೆಂದುಗಳು**

<><><>

ಗದಗ್ ಜಿಲ್ಲೆ ಎಲಸೂರು ಗ್ರಾಮ ಪಂಚಾಯಿತಿಯ ಸದಸ್ಯ, ಶಿವಯ್ಯ ಎಲಸೂರು, ಪ್ರಧಾನಮಂತ್ರಿಯವರ 'ಮನದ ಮಾತು' ಆಲಿಸಿದ್ದು, ತಮ್ಮ ಗ್ರಾಮದ ಎರಡು ಕೆರೆಗಳ ಪುನಃಶ್ಚೇತನದ ಬಗ್ಗೆ, ನರೇಂದ್ರ ಮೋದಿ ಅವರು ಉಲ್ಲೇಖಿಸಿದ್ದು, ಸುತ್ತಲಿನ ನಾಲ್ಕೂ ಗ್ರಾಮಸ್ಥರಲ್ಲಿ, ಸಂತಸ ತಂದಿದೆ ಎಂದಿದ್ದಾರೆ.

<><><>

ಗದಗ್ ಶಿವಯ್ಯ ಎಲಸೂರು ಧ್ವನಿ 40 ಸೆಕೆಂದುಗಳು

<><><>

ಗದಗ್ ಜಿಲ್ಲೆಯಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ನಡೆದ, ಕೆರೆಗಳ ಪುನಃಶ್ಚೇತನ ಕಾರ್ಯದ ಕುರಿತು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಮನದ ಮಾತಿ'ನಲ್ಲಿ ಉಲ್ಲೇಖಿಸಿ, ಸಂತಸ ವ್ಯಕ್ತಪಡಿಸಿದರು. ಅಶೋಕ ಫೆಲೋ ದಿವಂಗತ ಅಯ್ಯಪ್ಪ ಮಸಗಿ ಅವರ ಕೊಡುಗೆ, ಈ ನಿಟ್ಟಿನಲ್ಲಿ ಗಮನಾರ್ಹವಾಗಿದೆ.

ಈ ಕುರಿತು ಒಂದು ವರದಿ..

<><><>

*ಗದಗ್ ಜಿಲ್ಲೆ ಐತಿಹಾಸಿಕ ಹಾಗೂ ಪ್ರಾಕೃತಿಕ ಪ್ರಾಮುಖ್ಯತೆ ಹೊಂದಿದ ಜಿಲ್ಲೆ. ಜಿಲ್ಲೆಯ ವಿವಿಧ ತಾಲೂಕಿನ ನೂರಾರು ಗ್ರಾಮಗಳಲ್ಲಿ, ಸ್ವಯಂಸೇವಾ ಸಂಸ್ಥೆಗಳು ಮಳೆ ನೀರು ಕೊಯ್ಲು 'ಕ್ಯಾಚ್ ದ ರೇನ್' ಅಭಿಯಾನದ ಮೂಲಕ, ಗ್ರಾಮಸ್ಥರೊಂದಿಗೆ ಕೈಜೋಡಿಸಿ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಸಹಕಾರದೊಂದಿಗೆ, ಕರೆಗಳ ಹೂಳೆತ್ತಿ, ಮಳೆ ನೀರು ಸಂಗ್ರಹ, ಅಂತರ್ಜಲ ಹೆಚ್ಚಳ ಹಾಗೂ ಜಲಮೂಲಗಳ ಪುನಃಶ್ಚೇತನಕ್ಕೆ, ಗಮನಾರ್ಹ ಕೆಲಸ ಮಾಡಿವೆ.*

*ಎಸ್.ಬಿ.ಐ. ಫೌಂಡೇಷನ್ ಧನ ಸಹಾಯದಲ್ಲಿ ಕೆರೆಗಳ ಹೂಳೆತ್ತಿ, ಜಲ ಸಂರಕ್ಷಣಾ ಕಾರ್ಯದಲ್ಲಿ ಗಮನಾರ್ಹ ಕೆಲಸ ಮಾಡಿರುವ, ಹುಬ್ಬಳ್ಳಿಯ ಸಂಕಲ್ಪ ಸ್ವಯಂಸೇವಾ ಸಂಸ್ಥೆಯ ಸಂಸ್ಥಾಪಕ ಸಿಕಂದರ್ ಮೀರ್ ನಾಯಕ್, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ.*

<><><>

ವಿವೇಕ್ ಧ್ವನಿ 40 ಸೆಕೆಂದುಗಳು + ಗದಗ ಸಿಕಂದರ್ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

'ರಂಜಾನ್' ಮಾಸವಿಡೀ ಶ್ರದ್ಧೆಯಿಂದ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದ ಮುಸ್ಲಿಂ ಬಾಂಧವರು, ಇಂದು ಶ್ರದ್ಧಾ, ಭಕ್ತಿ ಹಾಗೂ ಸಂಭ್ರಮದಿಂದ, ಕುತುಬ್–ಎ–ರಂಜಾನ್, ಈದ್–ಉಲ್–ಫಿತರ್ ಸಂಪ್ರದಾಯ ಬದ್ಧವಾಗಿ ಆಚರಿಸಲಿದ್ದಾರೆ. ಸಾಮೂಹಿಕ ಪ್ರಾರ್ಥನೆ ಇಂದು ಬೆಳಗ್ಗೆ 9 ಗಂಟೆಗೆ, ಹುಬ್ಬಳ್ಳಿಯ ಚನ್ನಮ್ಮ ವೃತ್ತ, ಹಳೇ ಹುಬ್ಬಳ್ಳಿ, ಕಾರವಾರ ರಸ್ತೆಯ

ಈದ್ಗಾ ಮೈದಾನ ಹಾಗೂ ಧಾರವಾಡದ ಗುಲಗಂಜಿಕೊಪ್ಪದ ಈದ್ಗಾ ಮೈದಾನ ಸೇರಿದಂತೆ, ರಾಜ್ಯದೆಲ್ಲೆಡೆ ಪ್ರಾರ್ಥನಾ ಮಂದಿರಗಳಲ್ಲಿ, ನಮಾಜ್ ನಡೆಯಲಿದೆ. ಗಣ್ಯರು ಶುಭಾಶಯ ಕೋರಿದ್ದಾರೆ.

<><><>

ಬಡವರಿಗೆ ಮತ್ತು ಅಗತ್ಯ ಇರುವವರಿಗೆ ದಾನ ನೀಡಿ, ಹಬ್ಬ ಆಚರಿಸಲು ಅನುವಾಗುವಂತೆ, ಮುಸ್ಲಿಂ ಬಾಂಧವರು 'ಫಿತರ್' ಕೈಗೊಂಡಿದ್ದಾರೆ.

<><><>

ಮುಸ್ಲಿಂ ಧರ್ಮ ಗುರು ಮೌಲಾನಾ ನಯಾಜ್ ಆಲಂ ಶೇಖ್ ಮಾತನಾಡಿ, ಎಲ್ಲ ಧರ್ಮ, ಜಾತಿ, ಸಮುದಾಯದವರೂ ಪರಸ್ಪರ ಪ್ರೀತಿ, ಸೌಹಾರ್ದ ಹಾಗೂ ಭ್ರಾತೃತ್ವ ಭಾವದಿಂದ, ದೇಶದ ಏಳಿಗಾಗಿ ಒಗ್ಗಟ್ಟಿನಿಂದ ಬಾಳುವಂತಾಗಲಿ ಎಂದು, ಪ್ರಾರ್ಥಿಸುವುದಾಗಿ, ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ಕಲ್ಯಾಣ ಕರ್ನಾಟಕ ಭಾಗದ ರೈತಾಪಿ ಜನರಿಗೆ, ಯುಗಾದಿ ಹಬ್ಬದ ಕೊಡುಗೆಯಾಗಿ, ಭದ್ರಾ ಜಲಾಶಯದಿಂದ, ತುಂಗಭದ್ರಾ ಕಾಲುವೆಗೆ, ಎರಡು ಟಿ.ಎಂ.ಸಿ. ನೀರು ಹರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಏಪ್ರಿಲ್ 1 ರಿಂದ 5ರ ಅವಧಿಯಲ್ಲಿ, ಕಾಲುವೆಗೆ ನೀರು ಹರಿಸಲು ನಿರ್ಧರಿಸಲಾಗಿದ್ದು, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬೆಳೆದು ನಿಂತಿರುವ ಪೈರಿಗೆ, ಮತ್ತು ಅಲ್ಲಿನ ಜನರಿಗೆ ಕುಡಿಯುವ ನೀರಿನ ಲಭ್ಯತೆಯನ್ನು ಖಾತ್ರಿ ಪಡಿಸಲಿದೆ, ಎಂದಿದ್ದಾರೆ. ಬೆಳೆಗಳಿಗೆ ಮತ್ತು ಜನರಿಗೆ ಕುಡಿಯುವ ನೀರು ಪೂರೈಸಲು, ಸರ್ಕಾರ ಬದ್ಧವಾಗಿದ್ದು, ಎಲ್ಲ ಮುಂಜಾಗ್ರತಾ ಕ್ರಮ ಕೈಗೊಳ್ಳಲಿದೆ ಎಂದು, ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ.

<><><>

ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಿ.ಟಿ ಕವಿತಾ, 'ಆಪ್ತ ಗೆಳತಿ ನಿಮ್ಮ ಬಳಿಗೆ' ಎಂಬ ವಿನೂತನ ಯೋಜನೆಗೆ ಚಾಲನೆ ನೀಡಿ, ಗಮನ ಸೆಳೆದಿದ್ದಾರೆ. ರಾಜ್ಯದಲ್ಲಿಯೇ ಇದೊಂದು ವಿಶಿಷ್ಟ ಪ್ರಯೋಗವೆನಿಸಿದೆ. ಶಾಲೆ, ಕಾಲೇಜು ವಿದ್ಯಾರ್ಥಿನಿಯರು, ತಮ್ಮ ಸಮಸ್ಯೆಯನ್ನು ಬರೆದು, ಪೊಲೀಸ್ ಇಲಾಖೆ ಅಳವಡಿಸಿರುವ, ದೂರು ಪೆಟ್ಟಿಗೆಯಲ್ಲಿ ದೂರು ಸಲ್ಲಿಸಬಹುದಾಗಿದೆ. ಪ್ರತಿ ಶನಿವಾರ ಪೊಲೀಸ್ ಇಲಾಖೆ, ಸಂಬಂಧಪಟ್ಟ ಶಾಲಾ ಮುಖ್ಯಸ್ಥರ ಸಮ್ಮುಖದಲ್ಲಿ, ದೂರು ಪೆಟ್ಟಿಗೆಯಲ್ಲಿರುವ ದೂರುಗಳನ್ನು ಪರಿಶೀಲಿಸಿ, ವಿದ್ಯಾರ್ಥಿನಿಯ ಹೆಸರು ಗೌಪ್ಯವಾಗಿರಿಸಿ, ಸೂಕ್ತ ಕ್ರಮ ಕೈಗೊಳ್ಳಲಿದೆ. ಬಳಿಕ, ಬಿ.ಟಿ. ಕವಿತಾ ವಿದ್ಯಾರ್ಥಿನಿಯರೊಂದಿಗೆ, ಆಪ್ತ ಸಮಾಲೋಚನೆ ನಡೆಸಿ, ಅಭಯ ನೀಡಲಿದ್ದಾರೆ. ಜಿಲ್ಲೆಯ ಎಲ್ಲ ಶಾಲೆ, ಕಾಲೇಜು ಹಾಗೂ ವಿದ್ಯಾರ್ಥಿನಿ ವಸತಿ ನಿಲಯಗಳಿಗೆ ದೂರು ಪೆಟ್ಟಿಗೆಗಳನ್ನು ಉಚಿತವಾಗಿ ಅವರು ಒದಗಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆಯಲ್ಲಿ, ಶಿಶುಗಳ ಅಕ್ರಮ ದತ್ತು ಪ್ರಕ್ರಿಯೆ, ಅವಧಿ ಮೀರಿದ ಲಸಿಕೆ ವಿತರಣೆ ಮತ್ತು ಗುರುಮಠಕಲ್ ಆಸ್ಪತ್ರೆಯ ಶಿಶು ಮರಣಕ್ಕೆ ಸಂಬಂಧಿಸಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು, ವಿಚಾರಣೆ ನಡೆಸಲಿದೆ ಎಂದು, ಆಯೋಗದ ಸದಸ್ಯ ಶಶಿಧರ್ ಕೋಸಂಬೆ ತಿಳಿಸಿದ್ದಾರೆ. ಯಾದಗಿರಿಯ, ತಾಯಿ, ಮಕ್ಕಳ ಆಸ್ಪತ್ರೆಯಲ್ಲಿ, ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ಜಿಲ್ಲೆಯಲ್ಲಿ 84 ಬಾಲಕಿಯರು ಗರ್ಭ ಧರಿಸಿದ ವರದಿ ತಮ್ಮ ಗಮನಕ್ಕೆ ಬಂದಿದೆ. ಆಯಾ ಪೊಲೀಸ್ ಠಾಣೆಗಳಲ್ಲಿ ದಾಖಲಾದ ದೂರುಗಳ ಬಗ್ಗೆ, ಕೈಗೊಳ್ಳಲಾದ ಕ್ರಮಗಳ ವರದಿಯನ್ನು ತಮಗೆ ಶೀಘ್ರ ಸಲ್ಲಿಸುವಂತೆ, ಅವರು ನಿರ್ದೇಶಿಸಿದರು.

<><><>

ಚಿಕ್ಕಮಗಳೂರು ನಗರದಲ್ಲಿ ನಿತ್ಯ ಸಂಗ್ರಹವಾಗುವ, ತ್ಯಾಜ್ಯ ವಿಂಗಡಿಸಿ, ಸಾವಯವ ಗೊಬ್ಬರವಾಗಿ ಮಾರ್ಪಡಿಸಿ, ರಿಯಾಯಿತಿ ದರದಲ್ಲಿ, ಕೃಷಿಕರಿಗೆ ಮಾರಾಟ ಮಾಡಲಾಗುತ್ತಿದೆ ಎಂದು, ನಗರಸಭಾ ಅಧ್ಯಕ್ಷೆ ಸುಜಾತಾ ಶಿವಕುಮಾರ ತಿಳಿಸಿದ್ದಾರೆ. ಇಂದಾವರ ಗ್ರಾಮದ, ಕಸ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ, 'ಗಿರಿ ಹಸಿರು' ಸಾವಯವ ಗೊಬ್ಬರವನ್ನು, ಕಿಲೋ ಒಂದಕ್ಕೆ, 3 ರೂಪಾಯಿಯಂತೆ, ಅತ್ಯಂತ ಕಡಿಮೆ ದರದಲ್ಲಿ ಒದಗಿಸಲಾಗುತ್ತಿದೆ ಎಂದರು.

<><><>

ಪೌರಾಯುಕ್ತ ಬಿ.ಸಿ.ಬಸವರಾಜ್ ಮಾತನಾಡಿ, ಸಾರ್ವಜನಿಕರು ಕಡ್ಡಾಯವಾಗಿ, ಮೂಲದಲ್ಲೇ ಕಸ ವಿಂಗಡಿಸಿ, ಶೇಖರಿಸಿ, ತ್ಯಾಜ್ಯ ಸಂಗ್ರಹ ವಾಹನಕ್ಕೆ ನೀಡಿ, ನಗರದ ಅಂದ ಕಾಪಾಡಲು ಸಹಕರಿಸುವಂತೆ, ಮನವಿ ಮಾಡಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಲಬುರಗಿಯಲ್ಲಿ ಗರಿಷ್ಠ 40 ದಶಾಂಶ 6 ಡಿಗ್ರಿ ಸೆಲ್ಸಿಯಸ್, ಚಾಮರಾಜ ನಗರದಲ್ಲಿ ಕನಿಷ್ಠ 15 ದಶಾಂಶ 4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

<><><>

ಬ್ಯಾಂಕಾಕ್ ನಲ್ಲಿ ಸಂಭವಿಸಿದ ಭೂಕಂಪದಲ್ಲಿ, ಹಾವೇರಿ ಜಿಲ್ಲೆಯ ಐವರು ಸುರಕ್ಷಿತವಾಗಿದ್ದಾರೆ. ರಿಕ್ಟರ್ ಮಾಪಕದಲ್ಲಿ 7 ದಶಾಂಶ 7 ರಷ್ಟು ತೀವ್ರತೆಯ ಭೂಕಂಪಕ್ಕೆ, ಮ್ಯಾನ್ಮಾರ್‌ನಲ್ಲಿ ಸಾವಿರ ಜನ ಮೃತಪಟ್ಟಿದ್ದಾರೆ.

<><><>

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, 2023–24ನೇ ಸಾಲಿನ ರಾಷ್ಟ್ರೀಯ ಅತ್ಯುತ್ತಮ ಸಾರ್ವಜನಿಕ ಸಾರಿಗೆ ಪ್ರಶಸ್ತಿಗೆ ಭಾಜನವಾಗಿದೆ. ವಿಜಯಪುರ ವಿಭಾಗೀಯ ನಿಯಂತ್ರಣಾಧಿಕಾರಿ, ಹೊಸ ದಿಲ್ಲಿಯಲ್ಲಿ ಗೌರವ ಸ್ವೀಕರಿಸಿದರು.

<><><>

ಉಡುಪಿಯ ಇಂದ್ರಾಳಿ ರೇಲ್ವೆ ಮೇಲ್ಸೇತುವೆ ಕಾಮಗಾರಿಯನ್ನು, ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ಪರಿಶೀಲಿಸಿದರು.

<><><>

ಏಪ್ರಿಲ್ 2ನೇ ತಾರೀಖು, ಬೆಳಗ್ಗೆ 8 ಗಂಟೆಗೆ, ಪೊಲೀಸ್ ಧ್ವಜ ದಿನಾಚರಣೆ ಹಿನ್ನೆಲೆ, ಜಿಲ್ಲಾ ಪೊಲೀಸ್ ಕವಾಯತು ಮೈದಾನಗಳಲ್ಲಿ, ರಾಜ್ಯಾದ್ಯಂತ ಸಿದ್ಧತೆ ನಡೆದಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮನ್ ಕಿ ಬಾತ್; ಗದಗ ಜಿಲ್ಲೆಯ, ಕೆರೆಗಳ ಪುನಃಶ್ಚೇತನ ಕಾರ್ಯ ಶ್ಲಾಘಿಸಿದ, ಪ್ರಧಾನಮಂತ್ರಿ.
- 'ಆಪ್ತ ಗೆಳತಿ ನಿಮ್ಮ ಬಳಿಗೆ'; ವಿನೂತನ ಯೋಜನೆಗೆ, ಚಾಮರಾಜನಗರದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಿ.ಟಿ ಕವಿತಾ, ಚಾಲನೆ.

- **ಚಿಕ್ಕಮಗಳೂರು ನಗರದ ತ್ಯಾಜ್ಯ, ಈಗ, ‘ಗಿರಿ ಹಸಿರು’ ಸಾವಯವ ಗೊಬ್ಬರ – ನಗರಸಭೆ ಅಧ್ಯಕ್ಷೆ, ಸುಜಾತಾ ಶಿವಕುಮಾರ.**
- **ಇಂದು, ಮುಸ್ಲಿಂ ಬಾಂಧವರಿಂದ, ಈದ್–ಉಲ್–ಫಿತರ್ ಆಚರಣೆ; ಗಣ್ಯರ ಶುಭಾಶಯ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>